<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

**<u>ಕೆ.ಆರ್.ನಗರ</u>**

**<u>ಒ.ಎಸ್ 539/2017</u>**

**ಪಿಡಬ್ಲ್ಯೂ1**

**<u>ದಿನಾಂಕ 02.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ. ಎಸ್ ಕೆ ಎವ್ ವಕೀಲರಿಂದ 5 ಪ್ರತಿವಾದಿ ಪರ ವಕೀಲರುಃ</u>**

ನಾನು M. Com ಪದವಿಧರ ಎಂದರೆ ಸರಿ. ನನ್ನ ತಂದೆ 2010 ರಲ್ಲಿ ಮೃತಪಟ್ಟರು. ನನ್ನ ತಂದೆ ಮೃತ ಪಟ್ಟ ನಂತರ ನಿಪಿ 8 ರಂತೆ ಪೌತಿ ಖಾತೆಯಾಗಿದೆ ಎಂದರೆ ಸರಿ. ಮೂಲ ವಿಭಾಗಪತ್ರವನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ನಿಪಿ 2 ದೃಢಿಕೃತ ನಕಲಾಗಿದ್ದು ಮೂಲ ದಾಖಲೆ ಎಲ್ಲಿ ಎಂಬ ಪ್ರಶ್ನೆಗೆ ಸಾಕ್ಷಿಯು ಮೂಲ ಪತ್ರವನ್ನು ನಾನು ನೋಡಿಲ್ಲ ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಅದರಲ್ಲಿ ಪ್ರತ್ಯೇಕವಾಗಿ ವಿಸ್ತೀರ್ಣ ನಮೂದು ಆಗಿಲ್ಲ ಎಂದರೆ ಸರಿ.

ನಿಪಿ 2 ರ ಪ್ರಕಾರ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ 5 ನೇ ಪ್ರತಿವಾದಿ 10/1 ಮತ್ತು 4 ಎರಡು ಸರ್ವೆ ನಂಬರ್ ಗಳನ್ನು ಒಟ್ಟಾಗಿ ಸಮನಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದರ ಪ್ರಕಾರ 5 ನೇ ಪ್ರತಿವಾದಿಗೆ ಹಾಗೂ ನನ್ನ ತಂದೆಗೆ ಎರಡು ಸರ್ವೇ ನಂಬರ್ ಗಳಲ್ಲಿ ಸಮಪಾಲು ಬರಬೇಕು ಎಂದರೆ ಸರಿಯಲ್ಲ. ನಿಪಿ 2 ರ 5 ಪುಟದಲ್ಲಿ ಸರ್ವೇ ನಂಬರ್ 10/1 ಎಂದು ನಮೂದಿದೆ ಎಂದರೆ ಸರಿಯಲ್ಲ. 6 ನೇ ಪುಟದಲ್ಲಿ ಸರ್ವೇ ನಂಬರ್ 10/4 ವಿಸ್ತೀರ್ಣ ನಮೂದಿದ್ದು 5 ನೇ ಪ್ರತಿವಾದಿಗೆ 21 ಗುಂಟೆ ನಮೂದು ಇದೆ ಎಂದರೆ ಸರಿ. 8 ನೇ ಪುಟದಲ್ಲಿ ಸರ್ವೇ ನಂಬರ್ 10/1 ವಿಸ್ತೀರ್ಣ ನಮೂದಿದ್ದು 5 ನೇ ಪ್ರತಿವಾದಿಗೆ 10 1/2 ಗುಂಟೆ ನಮೂದು ಇದೆ ಎಂದರೆ ಸರಿಯಲ್ಲ. ದಾವಾ ಹೂಡುವ ಮುನ್ನ 5 ನೇ ಪ್ರತಿವಾದಿಗೆ ನೋಟೀಸ್ ನೀಡಿಲ್ಲ.

ಸ.ನಂ.10/4 ರ ಖಾತೆ ಬದಲಾಗಿರುವ ವಿಚಾರ ನನಗೆ 2017 ರಲ್ಲಿ ತಿಳಿಯಿತು. ಸದರಿ ವಿಚಾರ ನನ್ನ ತಂದೆಯ ಮರಣ ನಂತರ 2010 ರಲ್ಲೆ ನನ್ನ ಗಮನಕ್ಕೆ ಬಂದಿತು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಮೋಸ ಮಾಡಲು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿದ್ದು ಮುಂದಿನ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ